ದಿನಾಂಕಃ 22-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ವಕೀಲರಿಂದ,

1) ಮುದ್ದಪ್ಪ ಎಂಬುವವರು ನನಗೆ ಗೊತ್ತು. ಮದ್ದಪ್ಪ ರವರು ದಾವಾ ಸ್ವತ್ತುಗಳನ್ನು ಯಾವಾಗ ಖರೀದಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ಮುದ್ದಪ್ಪ ರವರ ತಮ್ಮನ ಹೆಸರು ಪುಟ್ಟಸ್ವಾಮ್ಮಪ್ಪ. ದಿನಾಂಕ 28/05/1995 ರಂದು ಮುದ್ದಪ್ಪ ಮತ್ತು ಪುಟ್ಟಸ್ವಾಮ್ಮಪ್ಪ ರವರು ವಿಭಾಗ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಭಾಗ ಪತ್ರದಂತೆ ಮುದ್ದಪ್ಪ ರರಿಗೆ ಮತ್ತು ಪುಟ್ಟಸ್ವಾಮಪ್ಪ ರವರಿಗೆ ಎಷ್ಟು ಆಸ್ತಿಗಳು ಬಂತು ಎಂದು ನನಗೆ ಗೊತ್ತಿರುವುದಿಲ್ಲ. ಮುದ್ದಪ್ಪ ಮತ್ತು ಪುಟ್ಟಸ್ವಾಮ್ಮಪ್ಪ ವಾರಸುದಾರರು ಎಷ್ಟು ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮುದ್ದಪ್ಪ ರವರು ಜೀವಂತ ಅವಧಿಯಲ್ಲಿ ಅಥವಾ ತೀರಿಕೊಂಡ ನಂತರ ಅವರ ಮಕ್ಕಳ ನಡುವೆ ವಿಭಾಗ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

2) ನಾನು ಪುಟ್ಟಸ್ವಾಮ್ಮಪ್ಪ ರವರ ಮನೆಯಲ್ಲಿ ಕೆಲಸ ಮಾಡಿರುತ್ತೇನೆ. ನಾನು ಪುಟ್ಟಸ್ವಾಮ್ಮಪ್ಪ ರವರ ಮನೆಯಲ್ಲಿ ಗದ್ದೆ ಕೆಲಸ ಮಾಡಿರುತ್ತೇನೆ. ಲಿಂಗಪ್ಪ ಅಲಿಯಾಸ್ ಪುಟ್ಟಸ್ವಾಮ್ಮಪ್ಪ ಯಾವಾಗ ತೀರಿಕೊಂಡರು ಒಂದರೆ ನನಗೆ ಗೊತ್ತಿರುವುದಿಲ್ಲ. ಲಿಂಗಪ್ಪ ಅಲಿಯಾಸ್ ಪುಟ್ಟಸ್ವಾಮ್ಮಪ್ಪ ಯಾವ ಆಸ್ತಿಗಳನ್ನು ಬಿಟ್ಟು ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಲಿಂಗಪ್ಪ ರವರು ಜೀವಂತ ಅವಧಿಯಲ್ಲಿ ಯಾವ ಆಸ್ತಿಗಳನ್ನು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಲಿಂಗಪ್ಪ ರವರು ತೀರಿಕೊಂಡ ನಂತರ ಅವರ ಕುಟುಂಬದಲ್ಲಿ ನೋಂದಾಯಿತ ವಿಭಾಗ ಪತ್ರ ಆಗಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ನಾನು ನಿಶಾಂತ್ ರವರ ಕೋರಿಕೆಯ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ. ನಿಶಾಂತ್ 2 ನೇ ಪ್ರತಿವಾದಿಯ ಮಗ. ನನಗೆ ಈ ದಾವೆಯ ಬಗ್ಗೆ ಯಾವ ಮಾಹಿತಿ ಇಲ್ಲದೆ ಇದ್ದರೂ ನಿಶಾಂತ್ ರವರ ಕೋರಿಕೆಯ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ